## ಕಸದ ಬುಟ್ಟಿ ಕಲಿಸುವ ಪಾಠ

ವಿಜಯನಗರ ಜಿಲ್ಲೆಯ ಹೊಸಪೇಟೆಯ ತುಂಗಭದ್ರಾ ಜಲಾಶಯ ಪರಿಸರದಲ್ಲಿ ವ್ಯೂ ಪಾಯಿಂಟ್ ಮತ್ತು ತುಂಗಭದ್ರಾ ಮಂಡಳಿಯ ವೈಕುಂಠ ಗೆಸ್ಟ್ ಹೌಸ್‌ನತ್ತ ಹೋಗಿದ್ದೆ. ಹಾಗೆಯೇ ಅಲ್ಲಿನ ಬೆಟ್ಟದ ಮೇಲಿನ ತೋಟದಲ್ಲಿ ಟೈ ಧರಿಸಿ ಶಿಸ್ತಿನ ಸಿಪಾಯಿಯಂತೆ ನಿಂತಿರುವ ಆಳೆತ್ತರದ ಗೊಂಬೆಯೊಂದು ಕಂಡು ಅಚ್ಚರಿಯಾಯಿತು.

ನೀಲಿ ಟೋಪಿ ಧರಿಸಿರುವ ಇದು ಡಸ್ಟ್‌ಬಿನ್ (ಕಸದ ತೊಟ್ಟಿ) ಆಗಿತ್ತು. ತುಂಗಭದ್ರಾ ಅಣೆಕಟ್ಟು ಪರಿಸರದ ಸ್ವಚ್ಛತೆ ಕಾಪಾಡುವ ಸಲುವಾಗಿ ಈ ಕಸದ ತೊಟ್ಟಿ ಅಳವಡಿಸಿದ್ದು, ಸಂದರ್ಶಿಸುವ ಮಕ್ಕಳೆಲ್ಲರೂ ಇದರಿಂದ ಆಕರ್ಷಿತರಾಗಿ ಕಸ ಕಡ್ಡಿಗಳನ್ನು ಅದರ ತಲೆ ಭಾಗದಲ್ಲಿರುವ ಅಗಲ ವ್ಯಾಸದ ರಂಧ್ರದೊಳಗೆ ಹಾಕಿ ಆನಂದಿಸುತ್ತಾರೆ. ಮಕ್ಕಳ ಈ ವರ್ತನೆ ಅನುಕರಣೀಯವಾದರೂ ದೊಡ್ಡವರು ಮಾತ್ರ ಅಲ್ಲಿನ ವನ ಪ್ರದೇಶದಲ್ಲಿ ಪ್ಲಾಸ್ಟಿಕ್ ಬಾಟಲಿ, ಪ್ಲೇಟು, ಪಾಲಿಥೀನ್ ಚೀಲ ಇತ್ಯಾದಿ ತ್ಯಾಜ್ಯ ವಸ್ತುಗಳನ್ನು ಬೇಕಾಬಿಟ್ಟಿ ಬಿಸಾಡಿರುವುದನ್ನು ಗಮನಿಸಬಹುದು. ಶುಚಿತ್ವಕ್ಕೆ ಮಹತ್ವ ನೀಡುವ ಉದ್ದೇಶದಿಂದ ಅಲ್ಲಲ್ಲಿ ಡಸ್ಟ್‌ಬಿನ್‌ಗಳನ್ನು ಇಟ್ಟಿದ್ದರೂ ಕೆಲವರು ಪರಿಸರ ನೈರ್ಮಲ್ಯಕ್ಕೆ ಗಮನ ನೀಡದಿರುವುದು ದುರದೃಷ್ಟಕರ. ಸಮಾಜದ ಆರೋಗ್ಯದ ದೃಷ್ಟಿಯಿಂದ ಪ್ರವಾಸಿ ತಾಣಗಳಲ್ಲಿ ಸ್ವಚ್ಛತೆ ಕಾಪಾಡುವ ಜವಾಬ್ದಾರಿಯನ್ನು ನಾಗರಿಕ/ಪ್ರವಾಸಿಗರೆಲ್ಲರೂ ಅರಿತು ಭವಿಷ್ಯದ ಜನಾಂಗಕ್ಕೆ ಮಾದರಿಯಾಗಬೇಕಿದೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ





## ಟೇಬಲ್ ನಿಂಬೆ

ಬೆಂಗಳೂರಲ್ಲಿರುವ ನನ್ನ ಮಗಳ ಮನೆಗೆ ಈಚೆಗೆ ಹೋಗಿದ್ದೆ. ಅವಳ ಮನೆಯ ಕೈತೋಟದಲ್ಲಿ ಒಂದಡಿ ಎತ್ತರದ ನಿಂಬೆಗಿಡದಲ್ಲಿ (ಟೇಬಲ್ ಲೆಮನ್) ಹಸಿರು ಬಣ್ಣದ ಪುಟ್ಟ ನಿಂಬೆ (ಒಂದೂವರೆ ಸೆ.ಮೀ. ಗಾತ್ರದ್ದು) ನೋಡಿ ಆಶ್ಚರ್ಯವಾಯಿತು. ಈ ನಿಂಬೆ ಸಸ್ಯ ಶಾಸ್ತ್ರೀಯವಾಗಿ ಸಿಟ್ರಸ್ ಲೆಮನ್ ಎಂದು ಕರೆಯಲಾಗುವ ಟೇಬಲ್ ಲೆಮನ್, ರುಟೇಸಿ ಕುಟುಂಬದಿಂದ (Rutaceae family) ಬಂದ ಒಂದು ಪೊದೆ ಸಸ್ಯ. ಈ ಗಿಡದಲ್ಲಿನ ಪುಟ್ಟಕಾಯಿಯಲ್ಲಿ ನಿಂಬೆರಸ ಇರಬಹುದೇ ಎಂದು ಅದರ ಮೇಲಿನ ಸಿಪ್ಪೆಯನ್ನು ಸೂಕ್ಷ್ಮವಾಗಿ ಸುಲಿದಾಗ ಪುಟ್ಟ ಪುಟ್ಟ ಐದು ಹೋಳುಗಳಿದ್ದವು. ಒಂದು ಹೋಳನ್ನು ಬಾಯಲ್ಲಿ ಹಾಕಿದಾಗ ನಿಂಬೆಹುಳಿಯ ಸ್ವಾದವನ್ನು ಅನುಭವಿಸಿದೆ. ಹಾಗೆಯೇ ಆ ನಿಂಬೆ ಹೋಳಲ್ಲಿ ನಾಲ್ಕೈದು ಬೀಜಗಳಿದ್ದವು. ಈ ಪುಟ್ಟ ಟೇಬಲ್ ಲೆಮನ್ ಗಿಡದಲ್ಲಿ ಬಿಟ್ಟ ನಿಂಬೆಕಾಯಿ ದೊಡ್ಡ ಗಾತ್ರವಾಗದೇ, ಅಲ್ಲಿಯೇ ಒಣಗಿ ಹೋಗುತ್ತದೆ ಅನ್ನೋದು ಮಗಳ ಸೂಕ್ಷ್ಮ ಗಮನವಾಗಿತ್ತು.

–ಅನುರಾಧ ಟಿ., ದಾವಣಗೆರೆ

## ಬಾಂಧವ್ಯದ ಕಂಬಳ ಪೂಜೆ

‘ಮುಹೂರ್ತ ಇಲ್ಲದೇ ಹುಟ್ಟುತ್ತಾನೆ, ಮುಹೂರ್ತ ಇಲ್ಲದೇ ಸಾಯುತ್ತಾನೆ. ಆದರೆ, ಇಡೀ ಜೀವನದಲ್ಲಿ ಶುಭ ಮುಹೂರ್ತದ ಹುಡುಕಾಟದಲ್ಲಿ ಇರುತ್ತಾನೆ ಮನುಷ್ಯ’ ಎಂಬುದು ಹಿರಿಯರ ಅಂಬೋಣ. ಆದರೆ ಇದರ ಜೊತೆಗೆ ಹಿರಿಯರು ಹಾಕಿ ಕೊಟ್ಟು ತಾವು ಅನುಸರಿಸಿದ, ನಮ್ಮ ಜೀವನಕ್ಕೆ ಸ್ಫೂರ್ತಿಯಾದ ಅನೇಕ ಅರ್ಥಗರ್ಭಿತ ರೂಢಿ ಸಂಪ್ರದಾಯಗಳನ್ನು ಗೊಡ್ಡು ಸಂಪ್ರದಾಯ, ಮೂಢನಂಬಿಕೆ ಎಂದು ಮರೆಯುತ್ತಿದ್ದೇವೆ.

ವಿಶೇಷವಾಗಿ ಕರ್ನಾಟಕದ ಕರಾವಳಿಯಲ್ಲಿ ಭತ್ತ ಬೆಳೆಯುವ ರೈತರು ಭತ್ತದ ಕಟಾವು ಮುಗಿದ ನಂತರ ಕಂಬಳ ಪೂಜೆಯೆಂದು ಬಂಧು ಬಳಗ, ನೆಂಟರಿಷ್ಟರನ್ನೆಲ್ಲ ಕರೆದು ಕಂಬಳ ಪೂಜೆ ಮಾಡಿ ವಿಶೇಷ ಊಟ ಸವಿಯುವುದು ರೂಢಿಯಲ್ಲಿತ್ತು. ಭತ್ತದ ತೆನೆಯ ನಡುವೆ, ಹಲಿ ಬಿಡಿಸಿದ ಕೊಳಗದಲ್ಲಿ ಅಕ್ಕಿ ತುಂಬಿ ಸುತ್ತಲೂ ವೀಳ್ಯದೆಲೆ ಇಟ್ಟು, ಮಲ್ಲಿಗೆ ಹಾಗೂ ಗೊಂಡೆ ಹೂಗಳ ಮಾಲೆಯಿಂದ ಸಿಂಗರಿಸಿ ಮನೆಯ ಯಜಮಾನ ಪೂಜೆ ಮಾಡುವ ಮೂಲಕ ಹೊಸ ಪೈರನ್ನು ಸ್ವಾಗತಿಸುವ ರೂಢಿ ಸಂಪ್ರದಾಯ ಇತ್ತೀಚೆಗೆ ಮರೆಯಾಗುತ್ತಾ ಸಾಗಿದೆ.

ಬಾಂಧವ್ಯಕ್ಕೆ ಇಂಬು ನೀಡುವ ಕಂಬಳ ಪೂಜೆಯಲ್ಲಿ ಕೊಳಗದಲ್ಲಿನ ಅಕ್ಕಿ, ಸದಾಕಾಲವೂ ಮನೆಯಲ್ಲಿ ತುಂಬಿರಲಿ, ಹಸಿರಾದ ವೀಳ್ಯದೆಲೆ ನಮ್ಮ ಜೀವನವನ್ನು ಹಸಿರಾಗಿಸಲಿ, ಮಲ್ಲಿಗೆಯ ಕಂಪು–ಗೊಂಡೆ ಹೂವಿನ ಸೊಬಗು ಸದಾಕಾಲವೂ ನಮ್ಮ ಜೀವನದಲ್ಲಿ ಇರಲಿ, ತಮ್ಮ ಪೈರು ಕಾಳು ತುಂಬಿದ ತೆನೆ ತರಲಿ ಎಂಬ ಈ ಪರಿಸರ ಪೂಜೆ ನಮ್ಮಿಂದ ಮರೆಯಾಗುವ ಸನ್ನಿವೇಶದಲ್ಲಿ ಅಂಕೋಲಾ ತಾಲ್ಲೂಕಿನ ಕೈಗಡಿಯ ಲಲಿತಾ ಹೆಗಡೆ ಈ ಕಂಬಳ ಪೂಜೆ ಮೂಲಕ ಗಮನ ಸೆಳೆದು ಈ ಲೇಖನ ಬರೆಯುವಂತೆ ಮಾಡಿದರು.

–ಬೀರಣ್ಣ ನಾಯಕ ಮೊಗಟಾ

